

# ಜೇಡ ಬಿಡಿಸಿದ ಚಿತ್ತಾರ!

'ನಿಸರ್ಗದಲ್ಲಿ ಜೇಡ ಎಂಬ ಪುಟ್ಟ ಹುಳ ಇದೆ. ಅದು ಅದ್ಭುತ ಕಸೂತಿ ಕೆಲ್ಸ ಮಾಡುತ್ತೆ' ಎಂದು ಮಿತ್ರ ಗ. ರಾ. ಭಟ್ಟ ಹೇಳಿದಾಗ ಆಶ್ಚರ್ಯವಾಗಿತ್ತು. ಜೇಡನ ಕಸೂತಿಯನ್ನು ನಾನು ನೋಡಬೇಕು ಎಂದು ಆ ಕ್ಷಣವೇ ಮಿತ್ರನಲ್ಲಿ ಒತ್ತಾಯದಿಂದ ವಿನಂತಿಸಿಕೊಂಡಿದ್ದೆ. ಆತ ತನ್ನ ಹೆಗಲಿನಲ್ಲಿ ಇಳಿಬಿಟ್ಟಿದ್ದ ಪುಟ್ಟ ಚೀಲವನ್ನು ತೆಗೆಯಲು ಆರಂಭಿಸಿದಾಗ ನನ್ನ ಕುತೂಹಲ ಇನ್ನೂ ಹೆಚ್ಚಾಗಿತ್ತು.

ಆಗಲೇ ಕ್ಯಾಮೆರಾವನ್ನು ತೆಗೆದು, ಜೇಡನ ಕಸೂತಿಯ ವೈವಿಧ್ಯವನ್ನು ತಾನೇ ಕ್ಲಿಕ್ಕಿಸಿಕೊಂಡಿದ್ದ ಚಿತ್ರವನ್ನು ಒಂದಾದ ಮೇಲೆ ಒಂದರಂತೆ ಮಿತ್ರ ತೋರಿಸುತ್ತಿದ್ದ. ಜೇಡನ ಆಕರ್ಷಕ ಚಿತ್ತಾರವನ್ನು ಕ್ಯಾಮೆರಾದಲ್ಲಿ ನೋಡಿದಾಗ ನನಗೂ ಖುಷಿಯಾಗಿತ್ತು. ಜೇಡನ ಆ ಅದ್ಭುತ ಆಕರ್ಷಕ ಬಂಗಿಯ ನೇಯ್ಗೆಯ ಚಿತ್ತಾರವನ್ನು ಮತ್ತೆ ಮತ್ತೆ ನೋಡಬೇಕು ಅನ್ನಿಸಿತ್ತು. ಏಯ್! ಆ ಹುಳದ ಬಗೆ ಬಗೆಯ ಚಿತ್ತಾರದ ವೈವಿಧ್ಯವನ್ನು ನೀನು ಯಾವ ವೇಳೆಯಲ್ಲಿ ಸೆರೆ ಹಿಡಿದೆಯೋ.... ಎಂದು ಮಿತ್ರನಲ್ಲಿ ಪುನರ್ ಪ್ರಶ್ನೆ ಹಾಕಿದ್ದೆ. ಆತ, ವಿವರಣೆಯನ್ನು ಕೊಡಲು ಆರಂಭಿಸಿದಾಗ ನಾನು ಅವ್ನ ಮಾತನ್ನೇ ಆಲಿಸುತ್ತಾ ಅಲ್ಲಿಯೇ ಕುಳಿತಿದ್ದೆ. ಜೇಡ ತನ್ನ ಕಸೂತಿಯ ಕಾರ್ಯವನ್ನು ಅಭಿವ್ಯಕ್ತಿಪಡಿಸದೇ ಇರುವ ಜಾಗವೇ ಇಲ್ಲ.



ಸ್ವಲ್ಪ ಹೊತ್ತು ನಾವು ನಿಂತಲ್ಲೇ ನಿಂತರೇ ಜೇಡಹುಳವು ನಮ್ಮನ್ನೇ ಬಂಧಿಸುವ ಬಲೆಯನ್ನು ನೇಯ್ದರು ಆಶ್ಚರ್ಯವಿಲ್ಲ ಎಂದು ಮಿತ್ರ ನುಡಿದಾಗ, ಕೊಂಚ ಸರಿದು ಜೇಡ ನನ್ನ ಸುತ್ತ ಬಲೆ ನೇಯ್ಗೆ ಮಾಡಿದೆಯಾ? ಎಂಬುದನ್ನು ಖಚಿತಪಡಿಸಿಕೊಂಡಿದ್ದೆ. ಸದಾ ಕಾರ್ಯನಿರತವಾಗಿರುವ ಜೇಡವು ನಮ್ಮ ಕಣ್ಣೆದುರಿನಲ್ಲಿಯೇ ಕೆಲವು ಕ್ಷಣದಲ್ಲಿ ಸುಂದರವಾದ ಚಿತ್ತಾರವನ್ನು ಸಿದ್ಧಪಡಿಸುತ್ತವೆ. ತನ್ನ ನೇಯ್ಗೆ ಕಾರ್ಯಕ್ಕೆ ವ್ಯಕ್ತಿ, ವಸ್ತು, ಸ್ಥಳ ಯಾವುದು ಜೇಡನಿಗೆ ಮುಖ್ಯವಲ್ಲ. ಪುಟ್ಟ ಸ್ಥಳದಲ್ಲಿಯೇ ಆದರೂ ತನ್ನ ಕಸೂತಿ ಕೆಲ್ಸವನ್ನು ಸೂಕ್ಷ್ಮವಾಗಿ ನೇಯ್ಗೆ ಮಾಡುವ ವಿಶಿಷ್ಟ ಕೀಟವಿದು.

ಚಳಿಗಾಲದ ಸಮಯದಲ್ಲಿ ಮಲೆನಾಡಿನ ಯಾವುದೇ ಕಡೆಗೂ ಹೋದರೂ ಜೇಡರ ಬಲೆ ಕಾಣಬಹುದು. ಅದರ ಬಗ್ಗೆ ಆಸಕ್ತಿ, ತಿಳಿಯುವ ಕುತೂಹಲವಿದ್ದರೇ ಮುಂಜಾನೆಯ ಹೊತ್ತು ಸೂರ್ಯ ಕಣ್ತೆರೆಯುವ ಸಂದರ್ಭಗಳಲ್ಲಿಯೇ ನೋಡಬೇಕು. ಸೂರ್ಯನ ಪ್ರಖರವಾದ ಬೆಳಕಿಗೆ ಜೇಡನ ನೇಯ್ಗೆಯ ಕಸುಬು ಆಕರ್ಷಕವಾಗಿಯೇ ಕಾಣಿಸುತ್ತದೆ. ಮನೆಯ ಎಲ್ಲಾ ಭಾಗಗಳಲ್ಲಿ ಬೆಟ್ಟಗುಡ್ಡದಲ್ಲಿರುವ ಗಿಡಗಂಟಿಗಳ ಮೇಲೆ, ಗದ್ದೆಹಳ್ಳದ ದಿಂಬ, ಹುಲ್ಲುಕಡ್ಡಿಗಳ ಮೇಲೆ.... ಹೀಗೆ ಎಲ್ಲೆಡೆ ಜೇಡನ ಅದ್ಭುತ ಚಿತ್ತಾರವನ್ನು ಕಾಣಬಹುದು.

ಜೇಡ ಹುಳವು ತನ್ನ ತೆಳ್ಳಗಿನ ದಾರದಿಂದ ತನಗಿಷ್ಟವಾದ ಚಿತ್ತಾರವನ್ನು, ಸೂಕ್ಷ್ಮವಾಗಿ ನೇಯ್ದು ಸಿದ್ಧಪಡಿಸುವುದೇ ಅದರ ವೈಶಿಷ್ಟ್ಯ. ನಾಜೂಕಿನಿಂದ ದಾರವನ್ನು ನೇಯುವ ಅದರ ಕಸೂತಿಯ ಕಲಾತ್ಮಕತೆ ಆಕರ್ಷಣೀಯ. ಅರೆ ಕ್ಷಣದಲ್ಲಿ ಸಿದ್ಧಪಡಿಸುವ ಜೇಡನ ವೈವಿಧ್ಯಮಯ ಚಿತ್ತಾರವು ಕೆಲವೇ ಸಮಯಗಳ ಕಾಲ, ನೈಜತೆಯಿಂದ ಕಂಗೊಳಿಸುತ್ತದೆ. ಆಮೇಲೆ ಕಣ್ಮರೆಯಾಗುತ್ತವೆ.

■ **ಗಣಪತಿ ಹಾಸ್ಪುರ**

